# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 537 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ |
| ಉತ್ತರಿಸುವ ದಿನಾಂಕ | : | 30-01-2026. |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ನೋಂದಾಯಿತ ಭಿಕ್ಷುಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಹಾಗೂ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ವಿಂಗಡಣೆಯೊಂದಿಗೆ ಸಂಪೂರ್ಣ ವಿವರ ನೀಡುವುದು) | ಕೇಂದ್ರ ಪರಿಹಾರ ಸಮಿತಿಯ ಅಧೀನದಲ್ಲಿ 15 ಜಿಲ್ಲಾ ಕೇಂದ್ರಗಳಾದ ಬೆಂಗಳೂರು ನಗರ, ಬೆಂಗಳೂರು ಪೂರ್ವ ವಲಯ, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ದಕ್ಷಿಣಕನ್ನಡ, ಕುಲ್ಬುರ್ಗಿ, ಕೋಲಾರ, ಮೈಸೂರು, ರಾಯಚೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರ ಜಿಲ್ಲೆಗಳಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ: 31.12.2025 ರ ಅಂತ್ಯಕ್ಕೆ ಒಟ್ಟು 3746 ನಿರಾಶ್ರಿತರುಗಳಿಗೆ ಆಶ್ರಯ ಕಲ್ಪಿಸಲಾಗಿದೆ. **ವಿವರಗಳನ್ನು ಅನುಬಂಧ- 1 ರಲ್ಲಿ ನೀಡಿದೆ.** |
| ಆ) | ಇವರಲ್ಲಿ ಮಕ್ಕಳೊಂದಿಗೆ ಭಿಕ್ಷಾಟನೆಯಲ್ಲಿ ತೊಡಗಿರುವವರ ಸಂಖ್ಯೆ ಎಷ್ಟು; | ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1976 ರ ಸೆಕ್ಷನ್ 2(4)ರನ್ವಯ 16 ವರ್ಷ ಮೇಲ್ಪಟ್ಟ ಪುರುಷ ಮತ್ತು 18 ವರ್ಷ ಮೇಲ್ಪಟ್ಟ ಮಹಿಳೆಯರು ಭಿಕ್ಷಾಟನೆಯಲ್ಲಿ ತೊಡಗಿದ್ದಲ್ಲಿ ಅವರುಗಳನ್ನು ಬಂಧಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಭಿಕ್ಷಾಟನೆ ಕಾರ್ಯಾಚರಣೆ ಸಂದರ್ಭದಲ್ಲಿ ಸದರಿ ವಯಸ್ಸಿಗಿಂತ ಕಡಿಮೆ ವಯಸ್ಸಿನ ತೊಡಗಿರುವ ಮಕ್ಕಳು ಮತ್ತು ಮಕ್ಕಳೊಂದಿಗೆ ಇರುವ ಮಹಿಳೆಯರು ಭಿಕ್ಷಾಟನೆಯಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯವಾಣಿ ಸಂಖ್ಯೆ 1098 ಗೆ ಕರೆ ಮಾಡಿ ರಕ್ಷಣೆ ಮಾಡಲು ಕ್ರಮವಹಿಸಲಾಗುವುದು.<br><br>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಮಕ್ಕಳೊಂದಿಗೆ ಭಿಕ್ಷಾಟನೆಯಲ್ಲಿ ತೊಡಗಿರುವವರನ್ನು ನೊಂದಣಿಸಿಕೊಳ್ಳುವುದಿಲ್ಲ. 2025-26ನೇ ಸಾಲಿನಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯದ ವತಿಯಿಂದ (ಜನವರಿ ಇಂದ ಡಿಸೆಂಬರ್) ಮಕ್ಕಳ ಸಹಾಯವಾಣಿ(1098)ಗೆ ಬಂದ ದೂರುಗಳನ್ನಾದರಿಸಿ ಮತ್ತು ಜಿಲ್ಲಾಮಟ್ಟದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಹಾಗೂ ವಿವಿಧ ಬಾಗೀದಾರ ಇಲಾಖೆಗಳ ಅಧಿಕಾರಿಗಳ ತಂಡದೊಂದಿಗೆ ಜಿಲ್ಲೆಗಳಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಿ ಭಿಕ್ಷಾಟನೆಯಲ್ಲಿ ತೊಡಗಿರುವ ಒಟ್ಟು 535 ಮಕ್ಕಳನ್ನು ರಕ್ಷಿಸಲಾಗಿದ್ದು, ನೊಂದಾಯಿತ ಭಿಕ್ಷುಕರುಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಇ) | ರಾಜ್ಯದಲ್ಲಿ ಭಿಕ್ಷುಕರ ಪುನರ್ವಸತಿ, ನಿಯಂತ್ರಣ ಮತ್ತು ಅವರಿಗೆ ಸಾಮಾಜಿಕ ಭದ್ರತೆ ಒದಗಿಸಲು ಸಮಾಜ ಕಲ್ಯಾಣ ಇಲಾಖೆಯು ಜಾರಿಗೆ ತಂದಿರುವ ಯೋಜನೆಗಳು ಯಾವುವು; ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಳ ಅನುಷ್ಠಾನಕ್ಕಾಗಿ ಮಂಜೂರು ಮಾಡಿದ ಅನುದಾನ ಹಾಗೂ ವ್ಯಯಿಸಲಾದ ಮೊತ್ತ ಎಷ್ಟು; (ವಿವರ ನೀಡುವುದು) | ಆಶ್ರಯ ಕಲ್ಪಿಸಲಾಗಿರುವ ಭಿಕ್ಷುಕರುಗಳಿಗೆ ಸಾಮಾಜಿಕ ಭದ್ರತೆಗಾಗಿ ಸಮವಸ್ತ್ರ, ಹಾಸಿಗೆ-ಹೊಂದಿಕೆ, ಉಪಹಾರ-ಊಟ, ವೈದ್ಯಕೀಯ ಚಿಕಿತ್ಸೆ, ಮನರಂಜನೆ, ಒದಗಿಸಲಾಗುತ್ತಿದೆ.<br><br>ಮುಂದುವರೆದು, ಸಾಮಾಜಿಕ ಭದ್ರತೆಗಾಗಿ ಆಧಾರ್ ಕಾರ್ಡ್ ಮಾಡಿಸಿ, ವೃದ್ಯಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ಮಂಜೂರಾತಿಗೆ ಕ್ರಮವಹಿಸಲಾಗಿದೆ.<br><br>ಪುನಃ ಭಿಕ್ಷಾಟನೆಗೆ ಮರಳದಂತೆ ವಿವಿಧ ವೃತ್ತಿ ತರಬೇತಿಗಳಾದ ಕೃಷಿ, ತೋಟಗಾರಿಕೆ, ತೆಂಗಿನನಾರಿನ ಮ್ಯಾಟ್ ತಯಾರಿಕೆ, ಗೃಹೋಪಯೋಗಿ ವಸ್ತುಗಳಾದ ಫಿನಾಯಲ್, ಸೋಪ್ ಆಯಿಲ್, ಹ್ಯಾಂಡ್ ವಾಷ್, ಇನ್ನಿತರೆ ತರಬೇತಿ, ಹಸು, ಕುರಿ, ಬಾತುಕೋಳಿ ಸಾಕಾಣಿಕೆ ತರಬೇತಿ, ವಿದ್ಯುತ್ ಮಗ್ಗ ಮತ್ತು ಕೈಮಗ್ಗದಲ್ಲಿ ಟವಲ್ ತಯಾರಿಕೆ, ಸಿದ್ಧ ಉಡುಪುಗಳ ತಯಾರಿಕೆ ತರಬೇತಿ ನೀಡಿ, ದಿನವೊಂದಕ್ಕೆ 8 ಗಂಟೆ ತರಬೇತಿ ನಿರತ ನಿರಾಶ್ರಿತರಿಗೆ ರೂ.75/-ಗಳು 8 ಗಂಟೆ ಅವಧಿಗಿಂತ ಕಡಿಮೆ ಅವಧಿ ತರಬೇತಿಗೆ ರೂ.38/-ಗಳಂತೆ ತರಬೇತಿ ಭತ್ಯೆ ಪಾವತಿಸಲಾಗುತ್ತದೆ. ಡಿಸೆಂಬರ್ -2025 ರ ಅಂತ್ಯಕ್ಕೆ ಒಟ್ಟು 936 ನಿರಾಶ್ರಿತರಿಗೆ ತರಬೇತಿ ನೀಡಲಾಗಿದೆ.<br><br>ಆಶ್ರಯ ಕಲ್ಪಿಸಲಾಗಿರುವ ನಿರಾಶ್ರಿತರುಗಳೊಂದಿಗೆ ಆಪ್ತ ಸಮಾಲೋಚಕರಿಂದ ಅವರುಗಳ ಕುಟುಂಬವನ್ನು ಪತ್ತೆ ಹಚ್ಚಿ ಅವರೊಂದಿಗೆ ಪತ್ರ ವ್ಯವಹಾರ ನಡೆಸಿ ಮರಳಿ ಮನೆಗೆ ಹಿಂದಿರುಗಿಸಲು ಕ್ರಮವಹಿಸಲಾಗುವುದು. ಡಿಸೆಂಬರ್ -2025 ರ ಅಂತ್ಯದವರೆಗೆ ಒಟ್ಟು 1026 ನಿರಾಶ್ರಿತರುಗಳನ್ನು ಮರಳಿಮನೆಗೆ ಹಿಂದಿರುಗಿಸಲು ಕ್ರಮವಹಿಸಲಾಗಿದೆ. **ವಿವರವನ್ನು ಅನುಬಂಧ – 3 ರಲ್ಲಿ ನೀಡಲಾಗಿದೆ.**<br><br>ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಪರಿಹಾರ ಸಮಿತಿಯು ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ಮತ್ತು |

| | | |
|---|---|---|
| | | ನಿಯಮಗಳು 1976 ರನ್ವಯ ಕಾರ್ಯನಿರ್ವಹಿಸುತ್ತಿದ್ದು, ಅಧಿನಿಯಮದ ಸೆಕ್ಷನ್ 31 ರನ್ವಯ ಸ್ಥಳೀಯ ಪ್ರಾಧಿಕಾರಗಳಾದ ಗ್ರೇಟರ್ ಬೆಂಗಳೂರು, ಮಹಾನಗರ ಪಾಲಿಕೆಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್ ಹಾಗೂ ಗ್ರಾಮ ಪಂಚಾಯಿತಿಗಳು ವಸೂಲಿಸಿರುವ ಭೂಮಿ ಮತ್ತು ಕಟ್ಟಡಗಳ ಮೇಲೆ ವಿಧಿಸುವ ಆಸ್ತಿ ಮೇಲೆ ಸಂಗ್ರಹಿಸುವ ತೆರಿಗೆಯ ಮೇಲೆ 3 % ಭಿಕ್ಷುಕರ ಕರದಲ್ಲಿ ವಸೂಲಾತಿ ವೆಚ್ಚ 10% ಕಡಿತಗೊಳಿಸಿ ಪಾವತಿಸುವ ಮೊತ್ತದ ಆಧಾರಿತವಾಗಿ ಆಯಾ ಸಾಲಿನ ಆಯವ್ಯಯ ಸಿದ್ಧಪಡಿಸಿ, ಭಿಕ್ಷುಕರ ಉಪಕರ ಸಂಗ್ರಹಣೆ ಆಧಾರಿತವಾಗಿ ಕಾರ್ಯನಿರ್ವಹಣೆ ಮಾಡಲಾಗುತ್ತಿದೆ. ಸದರಿ ಕೇಂದ್ರಗಳ ಕಾರ್ಯನಿರ್ವಹಣೆಗೆ ಸರ್ಕಾರದಿಂದ ಅನುದಾನ ಮಂಜೂರಾತಿ ಇರುವುದಿಲ್ಲ.<br>ಕಳೆದ ಮೂರು ವರ್ಷಗಳಲ್ಲಿ ಭಿಕ್ಷುಕರ ಉಪಕರ ಸಂಗ್ರಹಣೆ ಮತ್ತು ವೆಚ್ಚದ **ಮಾಹಿತಿಯನ್ನು ಅನುಬಂಧ – 4 ಮತ್ತು 5 ರಲ್ಲಿ ನೀಡಲಾಗಿದೆ.** |
| ಈ) | ಇತರ ರಾಜ್ಯಗಳಿಂದ ಬಂದಿರುವ ವ್ಯಕ್ತಿಗಳು ಅಥವಾ ಜಾಲಗಳು, ನವಜಾತ ಶಿಶುಗಳು ಸೇರಿದಂತೆ ಅಪ್ರಾಪ್ತ ಮಕ್ಕಳನ್ನು ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿರುವ ಗಂಭೀರ ಆರೋಪಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಇಲಾಖೆಯ ಬಳಿ ಇರುವ ಅಧಿಕೃತ ವರದಿಗಳೇನು; ಕಳೆದ ಎರಡು ವರ್ಷಗಳಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; | **ಸಮಾಜ ಕಲ್ಯಾಣ ಇಲಾಖೆಯಲ್ಲಿ ಬರುವ ಕೇಂದ್ರ ಪರಿಹಾರ ಸಮಿತಿಯು** ಮಕ್ಕಳನ್ನು ಭಿಕ್ಷಾಟನೆಗೆ ಬಳಸುವ ಧಂದೆಯನ್ನು ನಿರ್ಮೂಲನೆ ಮಾಡಲು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಭಿಕ್ಷಾಟನೆ ಕಾರ್ಯಾಚರಣೆ ಸಂದರ್ಭದಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳು ಕಂಡು ಬಂದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯವಾಣಿಗೆ ಕರೆ ಮಾಡಿ ರಕ್ಷಣೆಗೆ ಕ್ರಮವಹಿಸಲಾಗುತ್ತಿದೆ.<br>**ಒಳಾಡಳಿತ ಇಲಾಖೆಯು** ಇತರ ರಾಜ್ಯಗಳಿಂದ ಬಂದಿರುವ ವ್ಯಕ್ತಿಗಳು ಅಥವಾ ಜಾಲಗಳು, ನವಜಾತ ಶಿಶುಗಳು ಸೇರಿದಂತೆ ಅಪ್ರಾಪ್ತ ಮಕ್ಕಳನ್ನು ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿರುವ ಕುರಿತು ಕಳೆದ ಎರಡು ವರ್ಷಗಳಲ್ಲಿ ಅಂದರೆ 2023ರಲ್ಲಿ 06 ಪ್ರಕರಣಗಳು, 2024ರಲ್ಲಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ ಮತ್ತು 2025ರಲ್ಲಿ 02 ಪ್ರಕರಣಗಳು ದಾಖಲಾಗಿರುತ್ತವೆ ಹಾಗೂ ಮಕ್ಕಳನ್ನು ಭಿಕ್ಷಾಟನೆಗೆ ಬಳಸುವ ದಂಧೆಯನ್ನು ನಿರ್ಮೂಲನೆ ಮಾಡುವ ಕುರಿತು ಕೈಗೊಂಡ ಕ್ರಮಗಳ ಕುರಿತು ಮಾಹಿತಿಯನ್ನು **ಅನುಬಂಧ-6ರಲ್ಲಿ ನೀಡಲಾಗಿದೆ.** |
| ಉ) | ಮಕ್ಕಳನ್ನು ಭಿಕ್ಷಾಟನೆಗೆ ಬಳಸುವ ದಂಧೆಯನ್ನು ನಿರ್ಮೂಲನೆ ಮಾಡಲು ಸಮಾಜ ಕಲ್ಯಾಣ ಇಲಾಖೆ, ಗೃಹ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಾರ್ಮಿಕ ಇಲಾಖೆಗಳ ಸಮನ್ವಯದೊಂದಿಗೆ ಸರ್ಕಾರವು ಹಮ್ಮಿಕೊಂಡಿರುವ ಕಠಿಣ ಕ್ರಮಗಳು ಮತ್ತು ಭವಿಷ್ಯದ ಕಾರ್ಯಯೋಜನೆಗಳೇನು? (ವಿವರ ನೀಡುವುದು) | **ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ** ಸಂಬಂಧಿಸಿದಂತೆ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಮಕ್ಕಳನ್ನು ಭಿಕ್ಷಾಟನೆಗೆ ಬಳಸುವ ದಂಧೆಯನ್ನು ತಡೆಗಟ್ಟಲು ತೆಗೆದು ಕೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು **ಅನುಬಂಧ-7ರಲ್ಲಿ ನೀಡಲಾಗಿದೆ.**<br>**ಕಾರ್ಮಿಕ ಇಲಾಖೆಯ** ವತಿಯಿಂದ ಬಾಲ ಹಾಗೂ ಕಿಶೋರ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಪ್ರಕಾರ ಮಾಲೀಕ ಮತ್ತು ಕಾರ್ಮಿಕರ ಸಂಬಂಧಗಳಿಗೆ ಒಳಪಡುವ ಸಂಸ್ಥೆಗಳಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ಇರುತ್ತದೆ. ಮಕ್ಕಳ ಭಿಕ್ಷಾಟನೆಗೆ ಸಂಬಂಧಿಸಿದಂತೆ ಮಾಲೀಕರ ಸಂಬಂಧವಿರುವುದಿಲ್ಲ. ಆದ್ದರಿಂದ ಸದರಿ ಕಾಯ್ದೆಯಡಿ ಕ್ರಮ ಕೈಗೊಳ್ಳಲು ಬರುವುದಿಲ್ಲ.ಆದಾಗ್ಯೂ, ಸಹ ಮಕ್ಕಳ ಭಿಕ್ಷಾಟನೆಯನ್ನು ತಡೆಗಟ್ಟಲು ರಸ್ತೆ ಬದಿಗಳಲ್ಲಿ ಭಿಕ್ಷೆ ಬೇಡುವ, ಪೆನ್ನು ಪೆನ್ಸಿಲ್‌ಗಳು ಮತ್ತು ಇತರೆ ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳನ್ನು ರಕ್ಷಣೆ ಮಾಡಲು ಕಾರ್ಮಿಕ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರುಗಳನ್ನೊಳಗೊಂಡ ಕಾರ್ಯಪಡೆ (Task Force) ಯನ್ನು ರಚಿಸಿ ಕಾರ್ಮಿಕ ಆಯುಕ್ತರು ದಿನಾಂಕ:13/06/2023ರಲ್ಲಿ ಆದೇಶವನ್ನು ಹೊರಡಿಸಿರುತ್ತಾರೆ. ಸದರಿ ಕಾರ್ಯಪಡೆ (Task Force) ಯ ತಂಡಗಳು ರಸ್ತೆ ಬದಿಗಳಲ್ಲಿ ಭಿಕ್ಷೆ ಬೇಡುವ, ಪೆನ್ನು ಪೆನ್ಸಿಲ್‌ಗಳು ಮತ್ತು ಇತರೆ ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳು ಕಂಡು ಬರುವ ಸ್ಥಳಗಳಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತಿದ್ದು, ಅಂತಹ ಸ್ಥಳಗಳಲ್ಲಿ ಕಂಡು ಬರುವಂತ ಮಕ್ಕಳನ್ನು ರಕ್ಷಣೆ ಮಾಡಿ ಮಕ್ಕಳ ಕಲ್ಯಾಣ ಸಮಿತಿಗೆ (C.W.C) ಗೆ ಹಾಜರುಪಡಿಸಿ ಪುನರ್ವಸತಿಗೊಳಿಸಿ ಅವರ ಶಿಕ್ಷಣ ಮುಂದುವರಿಕೆಗೆ ಅವಕಾಶ ಮಾಡಿಕೊಡಲಾಗುತ್ತಿದೆ.<br>ಬಸ್ ನಿಲ್ದಾಣ, ರೈಲು ನಿಲ್ದಾಣ, ಮಾರ್ಕೆಟ್, ಸರ್ಕಲ್‌ಗಳಲ್ಲಿ ದೇವಸ್ಥಾನ ಹಾಗೂ ಇನ್ನಿತರ ಸ್ಥಳಗಳಲ್ಲಿ ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿರುವ ಬಗ್ಗೆ, ಕಂಡು ಬಂದರೆ ಸಾರ್ವಜನಿಕರು ಕೂಡಲೇ ಮಕ್ಕಳ ಸಹಾಯವಾಣಿ ಸಂಖ್ಯೆ-1098 ಅಥವಾ ಪೋಲೀಸ್ ತುರ್ತು ಸೇವೆ ಸಂಖ್ಯೆ-112 ಕ್ಕೆ ಕರೆ ಮಾಡಿ ತಿಳಿಸಲು ಹಾಗೂ ಅಂತಹ ಮಕ್ಕಳು ಕಂಡು ಬಂದರೆ ಅವರ ಬಗ್ಗೆ ವಿಚಾರಿಸಿ ಪುನರ್ವಸತಿಗಾಗಿ ಮಕ್ಕಳ ಕಲ್ಯಾಣ ಸಮಿತಿಗೆ ಬಿಡಲು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. |

**No: SWD/9/SBR/2026**

**(ಡಾ||ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.

# ಅನುಬಂಧ-1

ಕೇಂದ್ರ ಪರಿಹಾರ ಸಮಿತಿಯ ಆಡಳಿತ ವ್ಯಾಪ್ತಿಗೊಳಪಡುವ 15 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ 2025-26 ನೇ ಸಾಲಿನಲ್ಲಿ ರವರೆಗೆ ಬಂಧಿಸಲಾದ /ಬಿಡುಗಡೆ ಮಾಡಲಾದ ಮತ್ತು ರಕ್ಷಣೆ ನೀಡಲಾದ ನಿರಾಶ್ರಿತರ ವಿವರಣಾ ಪಟ್ಟಿ

| ಕ್ರ.ಸಂ | ನಿರಾಶ್ರಿತರ ಪರಿಹಾರ ಕೇಂದ್ರಗಳು | 01-04-2025 ತಾರೀಖಿನಿಂದ ಇದ್ದ ನಿರಾಶ್ರಿತರ ಸಂಖ್ಯೆ | | | ದಿ:01-04-2025 ರಿಂದ 31-12-2026 ರವರೆಗೆ ಬಂಧಿಸಲಾದ ನಿರಾಶ್ರಿತರ ಸಂಖ್ಯೆ | | | ದಿ:01-04-2025 ರಿಂದ 31-12-2026 ರವರೆಗೆ ಒಟ್ಟು ನಿರಾಶ್ರಿತರ ಸಂಖ್ಯೆ | | | ದಿ:01-04-2025 ರಿಂದ 31-12-2026 ರವರೆಗೆ ಬಿಡುಗಡೆ ಮಾಡಲಾದ ನಿರಾಶ್ರಿತರ ಸಂಖ್ಯೆ | | | ಮರಣ ಹೊಂದಿದ ನಿರಾಶ್ರಿತರ ಸಂಖ್ಯೆ | | | ದಿ:31-12-2026 ರ ಅಂತ್ಯಕ್ಕೆ ಇದ್ದ ನಿರಾಶ್ರಿತರ ಸಂಖ್ಯೆ | | |
|---|---|---|---|---|---|---|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| 1 | ಬೆಂಗಳೂರು | 720 | 180 | 900 | 735 | 286 | 1021 | 1455 | 466 | 1921 | 736 | 274 | 1010 | 23 | 6 | 29 | 696 | 186 | 882 |
| 2 | ಬೆಂಗಳೂರು ಪೂರ್ವ | 19 | 16 | 35 | 43 | 39 | 82 | 62 | 55 | 117 | 23 | 41 | 64 | 0 | 2 | 2 | 39 | 12 | 51 |
| 3 | ವಿಜಾಪುರ | 150 | 33 | 183 | 488 | 110 | 598 | 638 | 143 | 781 | 525 | 106 | 631 | 1 | 0 | 1 | 112 | 37 | 149 |
| 4 | ಬಳ್ಳಾರಿ | 127 | 31 | 158 | 184 | 45 | 229 | 311 | 76 | 387 | 187 | 36 | 223 | 0 | 0 | 0 | 124 | 40 | 164 |
| 5 | ಬೆಳಗಾವಿ | 93 | 30 | 123 | 69 | 18 | 87 | 162 | 48 | 210 | 49 | 15 | 64 | 3 | 2 | 5 | 110 | 31 | 141 |
| 6 | ಚಿತ್ರದುರ್ಗ | 305 | 72 | 377 | 94 | 32 | 126 | 399 | 104 | 503 | 69 | 18 | 87 | 0 | 1 | 1 | 330 | 85 | 415 |
| 7 | ದಾವಣಗೆರೆ | 148 | 0 | 148 | 170 | 0 | 170 | 318 | 0 | 318 | 152 | 0 | 152 | 0 | 0 | 0 | 166 | 0 | 166 |
| 8 | ಗುಲ್ಬರ್ಗಾ | 137 | 0 | 137 | 181 | 0 | 181 | 318 | 0 | 318 | 164 | 0 | 164 | 0 | 0 | 0 | 154 | 0 | 154 |
| 9 | ಹುಬ್ಬಳ್ಳಿ-ಧಾರವಾಡ | 64 | 46 | 110 | 153 | 50 | 203 | 217 | 96 | 313 | 120 | 46 | 166 | 2 | 2 | 4 | 95 | 48 | 143 |
| 10 | ಕೋಲಾರ | 127 | 35 | 162 | 141 | 52 | 193 | 268 | 87 | 355 | 134 | 55 | 189 | 0 | 1 | 1 | 134 | 31 | 165 |
| 11 | ಮೈಸೂರು | 393 | 49 | 442 | 410 | 86 | 496 | 803 | 135 | 938 | 425 | 97 | 522 | 2 | 2 | 4 | 376 | 36 | 412 |
| 12 | ದಕ್ಷಿಣ ಕನ್ನಡ | 137 | 2 | 139 | 247 | 8 | 255 | 384 | 10 | 394 | 228 | 8 | 236 | 0 | 0 | 0 | 156 | 2 | 158 |
| 13 | ರಾಯಚೂರು | 132 | 0 | 132 | 153 | 34 | 187 | 285 | 34 | 319 | 110 | 9 | 119 | 3 | 0 | 3 | 172 | 25 | 197 |
| 14 | ಶಿವಮೊಗ್ಗ | 184 | 0 | 184 | 278 | 52 | 330 | 462 | 52 | 514 | 236 | 20 | 256 | 2 | 0 | 2 | 224 | 32 | 256 |
| 15 | ತುಮಕೂರು | 248 | 77 | 325 | 266 | 81 | 347 | 514 | 158 | 672 | 281 | 88 | 369 | 5 | 5 | 10 | 228 | 65 | 293 |
| | ಒಟ್ಟು | 2984 | 571 | 3555 | 3612 | 893 | 4505 | 6596 | 1464 | 8060 | 3439 | 813 | 4252 | 41 | 21 | 62 | 3116 | 630 | 3746 |

ಕಾರ್ಯದರ್ಶಿ
ಕೇಂದ್ರ ಪರಿಹಾರ ಸಮಿತಿ
ಬೆಂಗಳೂರು-1

ಅನುಬಂಧ - ೩

## ಜನವರಿ-2025 ರಿಂದ ಡಿಸೆಂಬರ್ 2025ರ ಅಂತ್ಯದವರೆಗೆ(ಕ್ಯಾಲೆಂಡರ್ ವರ್ಷ) ದಾಖಲಾದ ಬಾಲ ಭಿಕ್ಷಾಟನೆ ಪ್ರಕರಣಗಳ ವರದಿ

| ಕ್ರ.ಸಂ. | ಜಿಲ್ಲೆಗಳು | ಜನವರಿ-2025 ರಿಂದ ಡಿಸೆಂಬರ್ 2025ರ ಅಂತ್ಯದವರೆಗೆ ನಡೆಸಲಾದ ರಕ್ಷಣಾ ಕಾರ್ಯಾಚರಣೆಗಳ ಸಂಖ್ಯೆ | ಭಿಕ್ಷಾಟನೆಯಿಂದ ರಕ್ಷಿಸಲ್ಪಟ್ಟ ಮಕ್ಕಳ ಸಂಖ್ಯೆ | | | ರಕ್ಷಿಸಿ ಸಿ.ಡಬ್ಲ್ಯೂ.ಸಿ ಮುಂದೆ ಹಾಜರು ಪಡಿಸಿದ ಮಕ್ಕಳ ಸಂಖ್ಯೆ | | | ರಕ್ಷಿಸಿ ದತ್ತು ಕೇಂದ್ರಕ್ಕೆ ದಾಖಲುಮಾಡಿದ ಮಕ್ಕಳ ಸಂಖ್ಯೆ | | | ರಕ್ಷಿಸಿ ಬಾಲ ಮಂದಿರಕ್ಕೆ ದಾಖಲುಮಾಡಿದ ಮಕ್ಕಳ ಸಂಖ್ಯೆ | | | ರಕ್ಷಿಸಿ ತೆರೆದ ತಂಗುದಾಣಗಳಿಗೆ ದಾಖಲುಮಾಡಿದ ಮಕ್ಕಳ ಸಂಖ್ಯೆ | | | ರಕ್ಷಿಸಿ ಪೋಷಕರ ವಶಕ್ಕೆ ನೀಡಿದ ಮಕ್ಕಳ ಸಂಖ್ಯೆ | | | ಭಿಕ್ಷಾಟನೆ ಮಾಡುತ್ತಿರುವ ಮಕ್ಕಳನ್ನು ತಾಯಿಯೊಂದಿಗೆ ಸ್ವಾಧಾರ ಅಥವಾ ಇತರೆ ಸಂಸ್ಥೆಗಳಿಗೆ ಕಳುಹಿಸಿದ ಮಕ್ಕಳ ಸಂಖ್ಯೆ | | | ಸೇತು ಬಂಧ ಶಿಕ್ಷಣಕ್ಕೆ ಒಳಪಡಿಸಿದ ಮಕ್ಕಳ ಸಂಖ್ಯೆ | ಶಾಲಾ ಶಿಕ್ಷಣ ಮುಂದುವರೆಸಿದ ಮಕ್ಕಳ ಸಂಖ್ಯೆ | ಶಿಕ್ಷಣ ಮುಂದುವರೆಸಲು ಪ್ರಾಯೋಜಕತ್ವ, ಬೆಂಬಲ ನೀಡಿದ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 |
| 1 | ಬಾಗಲಕೋಟೆ | 7 | 2 | 1 | 3 | 2 | 1 | 3 | 0 | 0 | 0 | 0 | 0 | 0 | 0 | 0 | 0 | 2 | 1 | 3 | 0 | 0 | 0 | 0 | 0 | 0 |
| 2 | ಬೆಂಗಳೂರು ನಗರ (ಕೇಂದ್ರ) | 23 | 38 | 13 | 51 | 38 | 13 | 51 | 0 | 0 | 0 | 24 | 6 | 30 | 0 | 0 | 0 | 9 | 2 | 11 | 4 | 6 | 10 | 0 | 0 | 0 |
| 3 | ಬೆಂಗಳೂರು ಉತ್ತರ | 13 | 2 | 8 | 10 | 2 | 8 | 10 | 0 | 0 | 0 | 0 | 0 | 0 | 0 | 0 | 0 | 2 | 8 | 10 | 0 | 0 | 0 | 0 | 0 | 0 |
| 4 | ಬೆಂಗಳೂರು ದಕ್ಷಿಣ | 29 | 8 | 6 | 14 | 8 | 5 | 13 | 0 | 0 | 0 | 0 | 0 | 0 | 0 | 1 | 1 | 0 | 0 | 0 | 8 | 5 | 13 | 0 | 0 | 0 |
| 5 | ಬೆಂಗಳೂರು ಪೂರ್ವ | 32 | 2 | 5 | 7 | 2 | 5 | 7 | 0 | 0 | 0 | 0 | 0 | 0 | 0 | 0 | 0 | 2 | 5 | 7 | 0 | 0 | 0 | 0 | 0 | 0 |
| 6 | ಬೆಂಗಳೂರು ಪಶ್ಚಿಮ | 1 | 0 | 1 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 1 | 0 | 0 | 0 | 0 | 0 | 0 |
| 7 | ಬೆಂಗಳೂರು (ಗ್ರಾ) | 14 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 8 | ಬೆಳಗಾವಿ | 0 | 16 | 12 | 28 | 16 | 12 | 28 | 0 | 0 | 0 | 12 | 0 | 12 | 0 | 6 | 6 | 1 | 1 | 2 | 5 | 3 | 8 | 0 | 6 | 0 |
| 9 | ಬಳ್ಳಾರಿ | 12 | 5 | 4 | 9 | 5 | 4 | 9 | 0 | 0 | 0 | 0 | 0 | 0 | 0 | 0 | 0 | 5 | 4 | 9 | 0 | 0 | 0 | 0 | 4 | 0 |
| 10 | ಬೀದರ್ | 15 | 7 | 8 | 15 | 7 | 8 | 15 | 0 | 0 | 0 | 2 | 5 | 7 | 0 | 0 | 0 | 1 | 3 | 4 | 2 | 2 | 4 | 0 | 14 | 0 |
| 11 | ಚಿಕ್ಕಬಳ್ಳಾಪುರ | 12 | 3 | 6 | 9 | 3 | 6 | 9 | 0 | 0 | 0 | 1 | 0 | 1 | 0 | 0 | 0 | 2 | 6 | 8 | 0 | 0 | 0 | 0 | 3 | 0 |
| 12 | ಚಿಕ್ಕಮಗಳೂರು | 20 | 6 | 7 | 13 | 6 | 7 | 13 | 0 | 0 | 0 | 1 | 1 | 2 | 0 | 0 | 0 | 5 | 6 | 11 | 0 | 0 | 0 | 0 | 6 | 0 |
| 13 | ವಿಜಯಪುರ | 20 | 5 | 6 | 11 | 5 | 6 | 11 | 0 | 0 | 0 | 0 | 0 | 0 | 0 | 0 | 0 | 5 | 6 | 11 | 0 | 0 | 0 | 0 | 0 | 0 |
| 14 | ಚಾಮರಾಜನಗರ | 22 | 3 | 2 | 5 | 3 | 2 | 5 | 0 | 0 | 0 | 0 | 0 | 0 | 0 | 0 | 0 | 3 | 2 | 5 | 0 | 0 | 0 | 0 | 0 | 0 |
| 15 | ಚಿತ್ರದುರ್ಗ | 48 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 16 | ದಾವಣಗೆರೆ | 20 | 3 | 11 | 14 | 3 | 11 | 14 | 0 | 0 | 0 | 2 | 6 | 8 | 0 | 0 | 0 | 1 | 4 | 5 | 0 | 1 | 1 | 0 | 0 | 0 |
| 17 | ಧಾರವಾಡ | 55 | 13 | 14 | 27 | 13 | 14 | 27 | 0 | 0 | 0 | 0 | 1 | 1 | 4 | 1 | 5 | 9 | 12 | 21 | 0 | 0 | 0 | 6 | 5 | 0 |
| 18 | ಗದಗ | 20 | 3 | 4 | 7 | 3 | 0 | 3 | 0 | 0 | 0 | 0 | 0 | 0 | 0 | 0 | 0 | 3 | 4 | 7 | 0 | 0 | 0 | 0 | 4 | 0 |
| 19 | ಕಲಬುರಗಿ | 0 | 3 | 4 | 7 | 3 | 4 | 7 | 0 | 0 | 0 | 0 | 0 | 0 | 0 | 0 | 0 | 3 | 4 | 7 | 0 | 0 | 0 | 0 | 2 | 2 |
| 20 | ಹಾಸನ | 27 | 6 | 0 | 6 | 6 | 0 | 6 | 0 | 0 | 0 | 6 | 0 | 6 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 21 | ಹಾವೇರಿ | 34 | 4 | 3 | 7 | 4 | 3 | 7 | 0 | 0 | 0 | 0 | 0 | 0 | 0 | 0 | 0 | 4 | 3 | 7 | 0 | 0 | 0 | 0 | 7 | 0 |
| 22 | ಉತ್ತರಕನ್ನಡ | 35 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 23 | ಕೊಡಗು | 3 | 1 | 2 | 3 | 1 | 2 | 3 | 0 | 0 | 0 | 0 | 0 | 0 | 0 | 0 | 0 | 1 | 2 | 3 | 0 | 0 | 0 | 0 | 0 | 0 |
| 24 | ಕೋಲಾರ | 23 | 11 | 7 | 18 | 6 | 2 | 8 | 0 | 0 | 0 | 1 | 0 | 1 | 0 | 0 | 0 | 10 | 7 | 17 | 0 | 0 | 0 | 0 | 0 | 0 |
| 25 | ಕೊಪ್ಪಳ | 15 | 6 | 8 | 14 | 5 | 5 | 10 | 0 | 0 | 0 | 1 | 0 | 1 | 0 | 0 | 0 | 5 | 8 | 13 | 0 | 0 | 0 | 0 | 7 | 0 |
| 26 | ಮಂಡ್ಯ | 82 | 3 | 0 | 3 | 3 | 0 | 3 | 0 | 0 | 0 | 0 | 0 | 0 | 0 | 0 | 0 | 3 | 0 | 3 | 0 | 0 | 0 | 0 | 0 | 0 |
| 27 | ದಕ್ಷಿಣಕನ್ನಡ | 97 | 80 | 57 | 137 | 13 | 10 | 23 | 0 | 0 | 0 | 2 | 3 | 5 | 0 | 0 | 0 | 72 | 50 | 122 | 6 | 4 | 10 | 0 | 0 | 0 |
| 28 | ಮೈಸೂರು | 28 | 38 | 49 | 87 | 38 | 49 | 87 | 0 | 0 | 0 | 29 | 40 | 69 | 0 | 0 | 0 | 0 | 0 | 0 | 9 | 9 | 18 | 0 | 0 | 0 |
| 29 | ರಾಯಚೂರು | 10 | 1 | 1 | 2 | 1 | 1 | 2 | 0 | 0 | 0 | 0 | 0 | 0 | 0 | 0 | 0 | 1 | 1 | 2 | 0 | 0 | 0 | 0 | 0 | 0 |
| 30 | ಬೆಂಗಳೂರು ದಕ್ಷಿಣ ಜಿಲ್ಲೆ | 35 | 0 | 2 | 2 | 0 | 2 | 2 | 0 | 0 | 0 | 0 | 0 | 0 | 0 | 0 | 0 | 0 | 2 | 2 | 0 | 0 | 0 | 0 | 0 | 0 |
| 31 | ಶಿವಮೊಗ್ಗ | 48 | 2 | 1 | 3 | 2 | 1 | 3 | 0 | 0 | 0 | 0 | 0 | 0 | 0 | 0 | 0 | 2 | 1 | 3 | 0 | 0 | 0 | 0 | 2 | 0 |
| 32 | ತುಮಕೂರು | 18 | 0 | 2 | 2 | 0 | 2 | 2 | 0 | 0 | 0 | 0 | 0 | 0 | 0 | 0 | 0 | 0 | 2 | 2 | 0 | 0 | 0 | 0 | 0 | 0 |
| 33 | ಉಡುಪಿ | 51 | 5 | 9 | 14 | 5 | 9 | 14 | 0 | 0 | 0 | 0 | 0 | 0 | 0 | 0 | 0 | 5 | 9 | 14 | 0 | 0 | 0 | 0 | 10 | 0 |
| 34 | ಯಾದಗಿರಿ | 12 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 35 | ವಿಜಯನಗರ | 8 | 2 | 4 | 6 | 1 | 1 | 2 | 0 | 0 | 0 | 0 | 0 | 0 | 0 | 0 | 0 | 2 | 4 | 6 | 0 | 0 | 0 | 0 | 4 | 0 |
| | **ಒಟ್ಟು** | **889** | **278** | **257** | **535** | **204** | **193** | **397** | **0** | **0** | **0** | **81** | **62** | **143** | **4** | **8** | **12** | **158** | **158** | **316** | **34** | **30** | **64** | **6** | **74** | **2** |

# ಅನುಬಂಧ-3

(ದಿನಾಂಕ.01.04.2025 ರಿಂದ 31.12.2025 ರವರೆಗೆ) ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ವಿವಿಧ ವೃತ್ತಿ ತರಭೇತಿ ಪಡೆದವರು ಹಾಗೂ ಮರಳಿ ಮನೆಗೆ ಕಳುಹಿಸಿರುವ ನಿರಾಶ್ರಿತರ ಅಂಕಿ-ಅಂಶ

| ಕ್ರ. ಸಂ | ನಿರಾಶ್ರಿತರ ಪರಿಹಾರ ಕೇಂದ್ರಗಳು | 01-04-2025 ರಿಂದ 31-12-2025 ರವರೆಗೆ ವಿವಿಧ ವೃತ್ತಿ ತರಭೇತಿಗಳನ್ನು ಪಡೆದ ನಿರಾಶ್ರಿತರ ಸಂಖ್ಯೆ | | | 01-04-2025 ರಿಂದ 31-12-2025 ರವರೆಗೆ ಮರಳಿ ಮನೆಗೆ ಕಳುಹಿಸಿರುವ ನಿರಾಶ್ರಿತರ ಸಂಖ್ಯೆ | | |
|---|---|---|---|---|---|---|---|
| | | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| 1 | ಬೆಂಗಳೂರು | 338 | 93 | **431** | 44 | 20 | **64** |
| 2 | ಬೆಂಗಳೂರು ಪೂರ್ವ | 9 | 1 | **10** | 1 | 1 | **2** |
| 3 | ವಿಜಾಪುರ | 0 | 0 | **0** | 5 | 4 | **9** |
| 4 | ಬಳ್ಳಾರಿ | 30 | 20 | **50** | 0 | 0 | **0** |
| 5 | ಬೆಳಗಾವಿ | 33 | 8 | **41** | 26 | 7 | **33** |
| 6 | ಚಿತ್ರದುರ್ಗ | 35 | 7 | **42** | 68 | 18 | **86** |
| 7 | ದಾವಣಗೆರೆ | 14 | 0 | **14** | 59 | 0 | **59** |
| 8 | ಗುಲ್ಬರ್ಗಾ | 9 | 0 | **9** | 16 | 0 | **16** |
| 9 | ಹುಬ್ಬಳ್ಳಿ-ಧಾರವಾಡ | 19 | 5 | **24** | 66 | 37 | **103** |
| 10 | ಕೋಲಾರ | 18 | 0 | **18** | 25 | 25 | **50** |
| 11 | ಮೈಸೂರು | 114 | 10 | **124** | 191 | 75 | **266** |
| 12 | ದಕ್ಷಿಣ ಕನ್ನಡ | 14 | 1 | **15** | 206 | 8 | **214** |
| 13 | ರಾಯಚೂರು | 55 | 4 | **59** | 0 | 0 | **0** |
| 14 | ಶಿವಮೊಗ್ಗ | 42 | 0 | **42** | 3 | 3 | **6** |
| 15 | ತುಮಕೂರು | 38 | 19 | **57** | 86 | 32 | **118** |
| | ಒಟ್ಟು | **768** | **168** | **936** | **796** | **230** | **1026** |

ಅನುಬಂಧ-4

## ಚುಕ್ಕೆ ಗುರುತಿನ ಸಂಖ್ಯೆ 469(537) ಕ್ಕೆ ಕ್ರಮ ಸಂಖ್ಯೆ(ಇ) ಗೆ 2023-24 ನೇ ಸಾಲಿನಿಂದ 2025-26 ನೇ ಸಾಲಿನವರಗಿನ ಸ್ವಿಕೃತ್ತಿ ಹಾಗೂ ವೆಚ್ಚದ ಮಾಹಿತಿ (ರೂ.ಲಕ್ಷಗಳಲ್ಲಿ)

| ಕ್ರ.ಸಂ | ಬ್ಯಾಂಕ್ ಹೆಸರು | ಬ್ಯಾಂಕ್ ಖಾತೆ ಸಂಖ್ಯೆ | ಸಾಲು | ಪ್ರಾರಂಭಿಕ ಶಿಲ್ಕು | ಸ್ವಿಕೃತಿ | ಒಟ್ಟು | ವೆಚ್ಚ | ಅಂತಿಮ ಶಿಲ್ಕು |
|---|---|---|---|---|---|---|---|---|
| 1 | 2 | 3 | | 4 | 5 | 8 | 9 | 11 |
| 1 | ಕೆ2 ಖಾತೆ | 8448~00~1110~0~18~550 | 2023-24 | 4,009.42 | 17,574.74 | 21,584.16 | 13,790.81 | 7,793.35 |
| 2 | | | 2024-25 | 7,793.35 | 10,007.06 | 17,800.41 | 5,359.16 | 12,441.25 |
| 3 | | | 2025-26 | 12,441.25 | 10,393.70 | 22,834.95 | 6,052.18 | 16,782.77 |

ಕಾರ್ಯದರ್ಶಿ
ಕೇಂದ್ರ ಪರಿಹಾರ ಸಮಿತಿ
ಬೆಂಗಳೂರು -91

## ಅನುಬಂಧ- 5

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್‌ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:469(537) ಕ್ಕೆ ಕ್ರಮ ಸಂಖ್ಯೆ(ಇ) ಗೆ 2023-24ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಮಾಡಲಾದ ವೆಚ್ಚದ ಮಾಹಿತಿ (ರೂ. ಲಕ್ಷಗಳಲ್ಲಿ)

| ಕ್ರ.ಸಂ | ಲೆಕ್ಕ ಶಿರ್ಷಿಕೆ | 2023-24 | 2024-25 | 2025-26 |
|---|---|---|---|---|
| I | ನಿರ್ದೇಶನ ಮತ್ತು ಆಡಳಿತ | 1548.7 | 1622.46 | 1091.84 |
| II | ಸಾದ್ವಿಲಾರು ವೆಚ್ಚಗಳು | 513.22 | 694.74 | 308.83 |
| III | ನಿರಾಶ್ರಿತರ ಹಾಸಿಗೆ ಹೊದಿಕೆ ಖರೀದಿ ಮತ್ತು ಹೊಲಿಗೆ ಖರ್ಚು | 192.83 | 63.14 | 22.95 |
| IV | ನಿರಾಶ್ರಿತರ ನಿರ್ವಹಣೆ | 1472.93 | 1373.29 | 1153.85 |
| V | ನಿರಾಶ್ರಿತರ ತರಬೇತಿ ಮತ್ತು ಪುನರ್ವಸತಿ /ದಿನಗೂಲಿ | 231.98 | 202.3 | 165.64 |
| VI | ಅಭಿವೃದ್ಧಿ ನಿರ್ವಹಣೆ | 596.36 | 404.36 | 213.01 |
| VII | ಕಟ್ಟಡ ಕಾಮಗಾರಿಗಳು (14 ಕೇಂದ್ರಗಳು ) | 6096.21 | 742.38 | 2047.01 |
| VIII | ಹೊಸ ನಿರಾಶ್ರಿತರ ಪರಿಹಾರ ಕೇಂದ್ರಗಳ ಪ್ರಾರಂಭ | 3045.38 | 153.39 | 629 |
| IX | ಐಟಿ.5% ಸಿಬ್ಬಂದಿ2%ಸಐಇಸಿ3%(10%) | 0.05 | 24.94 | 372.84 |
| X | ವಿದೇಶಿಯರನ್ನು ಸುರಕ್ಷಿತವಾಗಿರಲು ತಗಲುವ ವೆಚ್ಚ | 93.14 | 78.16 | 47.22 |
| | ಒಟ್ಟು ಮೊತ್ತ I ರಿಂದ X | 13790.8 | 5359.16 | 6052.19 |

ಕಾರ್ಯದರ್ಶಿ
ಕೇಂದ್ರ ಪರಿಹಾರ ಸಮಿತಿ
ಬೆಂಗಳೂರು - 9.

## ಅನುಬಂಧ-6

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:537ಕ್ಕೆ ವಿವರ.

**ಒಳಾಡಳಿತ ಇಲಾಖೆ:-**

ಬಸ್ ನಿಲ್ದಾಣ, ರೈಲು ನಿಲ್ದಾಣ, ಮಾರ್ಕೆಟ್, ಸರ್ಕಲ್‌ಗಳಲ್ಲಿ ದೇವಸ್ಥಾನ ಹಾಗೂ ಇನ್ನಿತರ ಸ್ಥಳಗಳಲ್ಲಿ ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿರುವ ಬಗ್ಗೆ ಕಂಡು ಬಂದರೆ ಸಾರ್ವಜನಿಕರು ಕೂಡಲೇ ಮಕ್ಕಳ ಸಹಾಯವಾಣಿ ಸಂಖ್ಯೆ-1098 ಅಥವಾ ಪೊಲೀಸ್ ತುರ್ತು ಸೇವೆ ಸಂಖ್ಯೆ-112 ಕ್ಕೆ ಕರೆ ಮಾಡಿ ತಿಳಿಸಲು ಹಾಗೂ ಅಂತಹ ಮಕ್ಕಳು ಕಂಡು ಬಂದರೆ ಅವರ ಬಗ್ಗೆ ವಿಚಾರಿಸಿ ಪುನರ್ವಸತಿಗಾಗಿ ಮಕ್ಕಳ ಕಲ್ಯಾಣ ಸಮಿತಿಗೆ ಬಿಡಲು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.

ವಿಶೇಷ ಕಾರ್ಯಾಚರಣೆಯಲ್ಲಿ (Special Drive) ಭಿಕ್ಷಾಟನೆಯ ಬಗ್ಗೆ ಮಹಿಳೆ ಮತ್ತು ಮಕ್ಕಳನ್ನು ಸಂರಕ್ಷಿಸಲು ಕೈಗೊಂಡ ಕ್ರಮಗಳು.

1) ಸಮಾಜ ಕಲ್ಯಾಣ ಇಲಾಖೆ, ಗೃಹ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಾರ್ಮಿಕ ಇಲಾಖೆಗಳ ಸಮನ್ವಯದೊಂದಿಗೆ ಜಾಗೃತಿ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ.

2) Child Helpline 1098 ಮೂಲಕ ಪೊಲೀಸರು, CWCs ಮತ್ತು DCPCs ಸಮನ್ವಯದೊಂದಿಗೆ ಮಕ್ಕಳನ್ನು ಪತ್ತೆ ಮಾಡಿ ರಕ್ಷಣಾ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ.

3) Section 76 ಪ್ರಕಾರ, *ಯಾರು ಮಕ್ಕಳನ್ನು ಭಿಕ್ಷೆಗೆ ಬಳಸುತ್ತಾರೆ ಅಥವಾ ಮಕ್ಕಳನ್ನು ಭಿಕ್ಷೆಗೆ ಕರೆದೊಯ್ಯುತ್ತಾರೆ, ಅವರಿಗೆ ಶಿಕ್ಷೆ* (imprisonment) 5 ವರ್ಷ ಅಥವಾ ರೂ.1.00 ಲಕ್ಷ ದಂಡ ಅಥವಾ ಎರಡನ್ನು ಸಹ ವಿಧಿಸಲಾಗುತ್ತದೆ.

4) Mission Vatsalya ಮಾದರಿ ಯೋಜನೆಗಳು ಮಕ್ಕಳಿಗೆ ಆಹಾರ, ಶಿಕ್ಷಣ, ವಸತಿ, ವೃತ್ತಿಪರ ತರಬೇತಿ, ಆರೋಗ್ಯ ಮತ್ತು ಕುಟುಂಬ ಆಧಾರದ ಪರಿಪೂರಕ ಬೆಂಬಲ ನೀಡಲು ಸಹಾಯ ಮಾಡುತ್ತವೆ.

5) ಮಕ್ಕಳ ಭಿಕ್ಷಾಟನೆಗೆ ಸಂಬಂಧಿಸಿದಂತೆ, ಪ್ರತಿ ಠಾಣಾ ಸರಹದ್ದಿನಲ್ಲಿ ಪ್ರತಿದಿನ ಈ ಬಗ್ಗೆ ನಿರಂತರವಾಗಿ ಮಾಹಿತಿ ಸಂಗ್ರಹಣೆ & ನಿರಂತರ ಗಸ್ತು ಸಮಯದಲ್ಲಿ ಈ ಕುರಿತು ಗಮನ ಇಡಲಾಗುತ್ತಿದ್ದು, ಮಕ್ಕಳ ಭಿಕ್ಷಾಟನೆ ತಡೆಗೆ ಸಂಬಂಧಿಸಿದಂತೆ ಎಸ್.ಜೆ.ಪಿ.ಯು ಮತ್ತು ಅದರ ಬಾಗಿದಾರಿ ಸಂಸ್ಥೆ/ಇಲಾಖೆಯವರೊಂದಿಗೆ ಸಮನ್ವಯ ಸಾಧಿಸಲಾಗುತ್ತಿರುತ್ತದೆ.

6) ಜಿಲ್ಲಾ ಮಟ್ಟದ ರಕ್ಷಣಾ ಕಾರ್ಯಾಚರಣೆಯಲ್ಲಿ ತಂಡದ ವಿವಿಧ ಇಲಾಖೆಯ ಅಧಿಕಾರಿ/ ಸಿಬ್ಬಂದಿಯವರೊಂದಿಗೆ ನೇರ ಸಂಪರ್ಕದಲ್ಲಿದ್ದು ಮಕ್ಕಳನ್ನು ರಕ್ಷಣೆ ಮಾಡಲಾಗುವುದು.

7) ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳ ಮತ್ತು ತಾಯಂದಿರ ರಕ್ಷಣೆ ಮಾಡಿ ಮಕ್ಕಳಿಗೆ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಲಾಗುತ್ತಿದ್ದು ಹಾಗೂ ತಾಯಂದರಿಗೆ ರಕ್ಷಣೆ ಮಾಡಿ ಭಿಕ್ಷುಕರ ಪರಿಹಾರ ಕೇಂದ್ರಕ್ಕೆ ಒಪ್ಪಿಸಲಾಗುವುದು.

8) ಭಿಕ್ಷಾಟನೆಯಲ್ಲಿ ರೆಸ್ಕ್ಯೂ ಮಾಡಿದ ಮಕ್ಕಳನ್ನು ಶಾಲೆಗಳಿಗೆ ದಾಖಲಿಸಲಾಗುವುದು. ಭಿಕ್ಷಾಟನೆಯಲ್ಲಿ ರೆಸ್ಕ್ಯೂ ಮಾಡಿದ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅನುದಾನ ಬಿಡುಗಡೆಯಾಗುತ್ತಿದೆ.

9) ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳನ್ನು ರಕ್ಷಣೆ ಮಾಡಿ ಅವರ ತಂದೆ-ತಾಯಿ ಅಥವಾ ಪೋಷಕರನ್ನು ಪ್ರತ್ಯೇಕವಾಗಿ ವಿಚಾರಣೆ ಮಾಡಲಾಗುವುದು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ/ NGO ರವರ ಜಂಟಿ ಕಾರ್ಯಾಚರಣೆಯಲ್ಲಿ ಭಾಗಿಯಾಗುವ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು/ ಸಿಬ್ಬಂದಿಯವರು ಕಡ್ಡಾಯವಾಗಿ ಮಫ್ತಿಯಲ್ಲಿರಲು ಸೂಚಿಸಲಾಗಿದೆ.

## ಅನುಬಂಧ-7

### ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:537ಕ್ಕೆ ವಿವರ.

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ:-

- ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರತಿ ಮಾಹೆ ಭಾಗೀದಾರ ಇಲಾಖೆಗಳ ಅಧಿಕಾರಿಗಳ ತಂಡದೊಂದಿಗೆ ಜಿಲ್ಲೆಗಳಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳನ್ನು ರಕ್ಷಿಸಲು ರಕ್ಷಣಾ ಕಾರ್ಯಚರಣೆಗಳನ್ನು ನಡೆಸಲಾಗುತ್ತದೆ.
- ರಕ್ಷಿಸಲ್ಪಟ್ಟ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಗಳ ಮಂದೆ ಹಾಜರುಪಡಿಸಲಾಗುವುದು. ತದನಂತರ, ಪಾಲನೆ ಮತ್ತು ಪೋಷಣೆ ಅವಶ್ಯಕತೆಯಿರುವ ಮಕ್ಕಳು ಕಂಡು ಬಂದಲ್ಲಿ ಅಂತಹ ಮಕ್ಕಳನ್ನು ಪಾಲನಾ ಕೇಂದ್ರಗಳಲ್ಲಿ ದಾಖಲಿಸಿ, ಪಾಲನೆ, ಪೋಷಣೆ ಮತ್ತು ಶಿಕ್ಷಣ ನೀಡಲು ಕ್ರಮಕೈಗೊಳ್ಳಲಾಗುತ್ತದೆ.
- ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಪಾಲನಾ ಸಂಸ್ಥೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಪಾಲನೆ/ ಪೋಷಣೆ ಅವಶ್ಯಕತೆ ಇರುವ ಮಕ್ಕಳು ಮತ್ತು ಕಾನೂನು ಸಂಘರ್ಷ ಕ್ಕೊಳಗಾದ ಮಕ್ಕಳ ಪುನರ್ವಸತಿಗೋಸ್ಕರ ಕಾರ್ಯ ನಿರ್ವಹಿಸುತ್ತಿವೆ.
- ದಿನಾಂಕ:12.08.2025ರಂದು ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರ ಅಧ್ಯಕ್ಷತೆಯಲ್ಲಿ "ಭಿಕ್ಷಾಟನೆಯಿಂದ ರಕ್ಷಿಸಲ್ಪಟ್ಟ ತಾಯಂದಿರೊಂದಿಗೆ ಇರುವ ಮಕ್ಕಳ ಪುನರ್ವಸತಿ ಕುರಿತು ಸಮಾಜ ಕಲ್ಯಾಣ ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.
- ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು, ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕರಿಗೆ ಒಟ್ಟು 697 ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಸುಮಾರು 5,75,349 ಭಾಗೀದಾರರು ಸಾರ್ವಜನಿಕರು ಒಳಗೊಂಡಂತೆ ಪ್ರಯೋಜನ ಪಡೆದಿರುತ್ತಾರೆ.
- ಧಾರ್ಮಿಕ ಕೇಂದ್ರಗಳ ಆಸುಪಾಸಿನಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳನ್ನು ರಕ್ಷಿಸಲು ಧಾರ್ಮಿಕ ಕೇಂದ್ರಗಳ ಸಹಕಾರ ಪಡೆಯಲು ಪತ್ರ ಸಂಖ್ಯೆ:ಮರನಿ / ಬಾ.ವಿ.ನಿ.ಕೋ/ಧಾ.ದ./2024-25, ದಿನಾಂಕ:14.11.2024 ರಂದು ಧಾರ್ಮಿಕ ದತ್ತಿ ಇಲಾಖೆಗೆ ಪತ್ರ ಬರೆಯಲಾಗಿದೆ.
- ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳನ್ನು ರಕ್ಷಿಸಲು ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಗಳಿದ್ದು, ಪ್ರತಿ ತ್ರೈಮಾಸಿಕ ಸಭೆ ಸೇರುವ ಮೂಲಕ ಭಿಕ್ಷಾಟನೆಯಲ್ಲಿ ತೊಡಗುವ ಮಕ್ಕಳನ್ನು ರಕ್ಷಿಸುವ ಮೂಲಕ ಮಹತ್ವದ ಪಾತ್ರ ವಹಿಸುತ್ತಿವೆ.
- ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲಾ ಕಾಲೇಜುಗಳಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯದ ವಿವಿಧ ಯೋಜನೆಗಳೊಂದಿಗೆ ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ (ಬಾಲಕಾರ್ಮಿಕತೆ, ಭಿಕ್ಷಾಟಣೆ ಹಾಗೂ ಪೋಕ್ಸೋ) ನಿರಂತರವಾಗಿ ಅರಿವು ಮೂಡಿಸಲಾಗಿದೆ.
- ರಾಜ್ಯಾದ್ಯಂತ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಯೋಜನೆಗಳ ಕುರಿತು ಸರ್ಕಾರಿ ಶಾಲೆಗಳ ಕಾಂಪೌಂಡ್ ಮೇಲೆ ಡಿಜಿಟಲ್ ವಾಲ್ ಪೈಟಿಂಗ್ ಹಾಗೂ ಪೋಸ್ಟರ್ ಗಳನ್ನು ಸಿದ್ದಪಡಿಸಿ ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸುವ ಮೂಲಕ, ಹಾಗೂ BMTC, KSRTC ಬಸ್‌ಗಳಲ್ಲಿ ಮತ್ತು ಮೆಟ್ರೋಗಳಲ್ಲಿ ಡಿಜಿಟಲ್ ಪ್ರಚಾರದ ಮೂಲಕ ಅರಿವು ಮೂಡಿಸಲಾಗಿದೆ.

ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳ ರಕ್ಷಣೆಗೆ ಇ-ಗುರುತು ಮೊಬೈಲ್ ಆಪ್ ನ್ನು ಎಲ್ಲಾ ಸಾರ್ವಜನಿಕರು ತಮ್ಮ ಮೊಬೈಲ್ ನಲ್ಲಿ Google Play store ನಿಂದ ಸುಲಭವಾಗಿ ಡೌನ್ಲೋಡ್ ಮಾಡಿಕೊಂಡು ರಸ್ತೆ ಬದಿ, ಟ್ರಾಫಿಕ್ ಸಿಗ್ನಲ್, ಮಾರ್ಕೆಟ್ ಹಾಗೂ ಸಾರ್ವಜನಿಕ ಪ್ರದೇಶಗಳಲ್ಲಿ ಮಕ್ಕಳ ಭಿಕ್ಷಾಟನೆ, ಬೀದಿ ಬದಿ ವ್ಯಾಪಾರ, ಶಾಲೆ ಬಿಟ್ಟು ಅಲೆದಾಡುತ್ತಿರುವ, ಪರಿತ್ಯಜಿಸಲ್ಪಟ್ಟ ಮಗುವಿನೊಂದಿಗೆ ಭಿಕ್ಷೆ ಬೇಡುವ ತಾಯಿ ಹಾಗೂ ಇನ್ನಿತರೆ ಚಟುವಟಿಕೆಗಳಲ್ಲಿ ತೊಡಗಿರುವ ಮಕ್ಕಳು ಎಲ್ಲೇ ಕಂಡು ಬಂದಲ್ಲಿ, ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕ ಸದರಿ ಮಗುವಿನ ಛಾಯಾಚಿತ್ರವನ್ನು ತೆಗೆದು ಇ-ಗುರುತು ಆಪ್ ನಲ್ಲಿ ಅಳವಡಿಸಬೇಕಾಗಿರುತ್ತದೆ. ತದನಂತರ, ಇ-ಗುರುತು ಆಪ್ ನಲ್ಲಿ ಮಗುವಿನ ಸ್ಥಳದ ಭೌಗೋಳಿಕ ನಿರ್ದಿಷ್ಟತೆಯ ಅನುಸಾರವಾಗಿ ಸಂಬಂಧಿಸಿದ ವ್ಯಾಪ್ತಿಯ ನೋಡಲ್ ಅಧಿಕಾರಿಗಳು ಮಗುವನ್ನು ರಕ್ಷಿಸಿ, ಪಾಲನೆ ಮತ್ತು ಪುನರ್ವಸತಿ ಕುರಿತು ಅಗತ್ಯ ಕ್ರಮ ವಹಿಸಲು ಸಾದ್ಯವಾಗುತ್ತದೆ. ಇದರಿಂದ ಮಕ್ಕಳ ಅನೈತಿಕ ಸಾಗಾಣಿಕೆ, ಲೈಂಗಿಕ ದುರ್ಬಳಕೆ ಮುಂತಾದ (Illegal activities) ಅನೈತಿಕ ಚಟುವಟಿಕೆಗೊಳಗಾಗುವುದನ್ನು ತಡೆಯಲು ಸಹಕಾರಿಯಾಗುತ್ತದೆ. ಆದ್ದರಿಂದ, ಇ-ಗುರುತು ಮೊಬೈಲ್ ಆಪ್ ನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲು ಇಲಾಖೆಯಿಂದ ಕ್ರಮಕೈಗೊಳ್ಳಲಾಗುತ್ತಿದೆ.